# ಧ್ವನಿಯಲ್ಲಿಯೇ ಮೈದಳೆವ ಕಥನ



ಧ್ವನಿಯ ಮೂಲಕವೇ ಕಥೆಯೊಂದನ್ನು ಕಟ್ಟುವ ಈ ಪ್ರಯತ್ನ, ದೃಶ್ಯಮಾಧ್ಯಮದ ಸಾಧ್ಯತೆಯನ್ನು ಹೊಸ ಬಗೆಯಲ್ಲಿ ನೋಡುವಂತೆ ಚೋದಿಸುತ್ತದೆ.

■ ಗೌರಿ

ಒಬ್ಬ ವ್ಯಕ್ತಿಯ ಅಸ್ತಿತ್ವ ಅಥವಾ ಘಟನೆಗಳ ಅರಿವು ನಮ್ಮೊಳಗೆ ಮೂಡುವುದು ಅದರ ಭೌತಿಕ ಆಕಾರದಿಂದಲೋ ಅಥವಾ ಧ್ವನಿಯಿಂದಲೋ? ಈ ಪ್ರಶ್ನೆಯನ್ನು ಇನ್ನಷ್ಟು ಸೀಮಿತಗೊಳಿಸಿ, ಕೇಂದ್ರೀಕರಿಸಿ ಕೇಳುವುದಾದರೆ ಸಿನಿಮಾ ಮಾಧ್ಯಮದ ಶಕ್ತಿ ಇರುವುದು ತೆರೆಯ ಮೇಲೆ ಕಾಣುವ ಪಾತ್ರ ಇಲ್ಲವೇ ದೃಶ್ಯಗಳಿಂದಲೋ ಅಥವಾ ಧ್ವನಿಸಂಯೋಜನೆಯಲ್ಲಿಯೋ? ಸಿನಿಮಾ ಒಂದು ಕಲೆಕ್ಟಿವ್ ಆರ್ಟ್; ದೃಶ್ಯ, ಪಾತ್ರ, ಧ್ವನಿ ಎಲ್ಲವೂ ಸೇರಿಯೇ ಅದರ ಪರಿಣಾಮ ಸಹೃದಯನ ಮನಸೊಳಗೆ ಪೂರ್ಣಗೊಳ್ಳುವುದು ಎಂದು ಹೇಳುವುದು ಸುಲಭ. ಆದರೆ ಅವುಗಳ ನಡುವಿನ ಸಂಬಂಧ ಯಾವ ರೀತಿಯದು ಎಂಬುದು ಕುತೂಹಲ ಹುಟ್ಟಿಸುವ ವ್ಯಾಕರಣ. ಈ ವ್ಯಾಕರಣವನ್ನೇ ಕುರಿತ ಕುತೂಹಲವನ್ನೇ ಪ್ರಯೋಗವಾಗಿಸಿದ ಕಿರುಚಿತ್ರ ಜೋಶುಆ ಗಿಆಲಿಯಾನೋ ನಿರ್ದೇಶನದ ಕಿರುಚಿತ್ರ 'ಇನ್ ಸೌಂಡ್ ವಿ ಲೈವ್ ಫಾರೆವರ್.'

ಈ ಕಿರುಚಿತ್ರ ಆರಂಭವಾಗುವುದು ಒಂದು ವಿಂಡ್ ಫ್ಯಾನ್‌ನ ಶಬ್ದದಿಂದ. ದಟ್ಟ ಕಾಡಿನ ಮಧ್ಯೆ ಒಂದು ಬಯಲಿನಂಥ ಜಾಗ. ಅದರ ಒಂದು ಬದಿಯಲ್ಲಿ ವಿಂಡ್ ಫ್ಯಾನ್ ತಿರುಗುತ್ತಿದೆ. ಅದೇ ರೆಕ್ಕೆಗಳ ಮೂಲಕ ಆ ಬಯಲನ್ನು ನೋಡುತ್ತಿದೆಯೇನೋ ಎಂಬ ರೀತಿ ದೃಶ್ಯ ಸಂಯೋಜನೆ ಇದೆ. ಮುಂದಿನ ದೃಶ್ಯದಲ್ಲಿ ಒಂದು ಕೆಂಪು ಜೀಪ್ ಥರದ ವಾಹನ. ಬಯಲಲ್ಲಿ ನಿಂತಿದೆ. ತೆರೆದ ಬಾಗಿಲು. ಮುಂದಿನ ಸೀಟಿನಲ್ಲಿ ಒಂದು ಹಳೆಯ ರೇಡಿಯೊ. ಅದರಲ್ಲಿ ಮೆಲುವಾದ ಸಂಗೀತ ಮೊಳಗುತ್ತಿದೆ.

ತೆರೆಯ ಮೇಲೆ ಈ ದೃಶ್ಯವನ್ನು ತೋರಿಸುತ್ತಲೇ ನಿರ್ದೇಶಕರು ಧ್ವನಿಯ ಮೂಲಕ ಅದಕ್ಕೂ ಹಿಂದಿನ ಫ್ಲಾಶ್‌ಬ್ಯಾಕ್ ಅನ್ನು ನಿರೂಪಿಸಲು ತೊಡಗುತ್ತಾರೆ. ಚಲಿಸುತ್ತಿರುದ ಜೀಪಿನ ಸದ್ದು ನಿಲ್ಲುತ್ತದೆ. ಪುರುಷಧ್ವನಿಯೊಂದು 'ನನಗೆ ರೇಡಿಯೊದಲ್ಲಿ ಬರುತ್ತಿರುವ ಈ ಕಾಡು ತುಂಬ ಇಷ್ಟ' ಎನ್ನುತ್ತಾನೆ.



**ಹೆಸರು:** ಇನ್ ಸೌಂಡ್, ವಿ ಲೈವ್ ಫಾರೆವರ್ (ಅಮೆರಿಕ)
ನಿರ್ದೇಶನ: ಜೋಶುಆ ಗಿಆಲಿಯಾನೋ
**ನಿರ್ಮಾಣ ಮತ್ತು ಛಾಯಾಗ್ರಹಣ:** ಕ್ರಿಸ್ಟೋಫರ್ ಬೆಹೆನ್
**ಸಂಕಲನ:** ಲಿಲಿತ್ ಆಲೋಯಾನ್
**ಧ್ವನಿ ವಿನ್ಯಾಸ:** ವಿಲಿಯಮ್ ತಾಬಾನೋಯು
**ತಾರಾಗಣ:** ಲೂಸಿಲೇ ಶಾರ್ಪ್, ಡ್ರೂ ಮಾರ್ಕ್ವರ್ಟ್, ಟಾರ್ಸನ್ ಜಾನ್ಸನ್, ಎರಿಕ್ ರೈಸ್

ಅದಕ್ಕೆ ಹೆಣ್ಣುಧ್ವನಿಯೊಂದು ಪ್ರತಿಕ್ರಿಯಿಸುತ್ತದೆ.

ಪಟ್ಟಣದ ಜೋಡಿಯೊಂದು ಪ್ರಣಯವಿಹಾರಕ್ಕಾಗಿ ಕಾಡಿಗೆ ಬಂದಿದೆ. ಅವರ ಸರಸದ ಮಾತು, ಸಲ್ಲಾಪದ ನಡೆಯನ್ನು ಧ್ವನಿಯ ಮೂಲಕವೇ ಹೇಳುತ್ತ ಹೋಗುತ್ತಾನೆ. ಹಾಗೆ ಹೇಳುವ ಕಥೆ ನಡೆಯುತ್ತಿರುವುದೂ ವರ್ತಮಾನದಲ್ಲಲ್ಲ. ವರ್ತಮಾನದ ದೃಶ್ಯಗಳನ್ನು ಇಟ್ಟುಕೊಂಡು ಕೆಲವು ಸಮಯದ ಹಿಂದೆ ಅದೇ ಜಾಗದಲ್ಲಿ ನಡೆದ ಕಥೆಯನ್ನು 'ಕೇಳಿಸುತ್ತ' ಹೋಗುತ್ತದೆ.

ನಾನ್ ಲೀನಿಯರ್ ನಿರೂಪಣಾ ಕ್ರಮದ ಮೂಲಕ ಕಟ್ಟಿದ ಈ ಕಥೆಯನ್ನು ನಿರ್ದೇಶಕರು ಮಧ್ಯದಲ್ಲಿ ನಿಂತು ಎರಡೂ ಬದಿಗೆ ವಿಸ್ತರಿಸುತ್ತ ಹೋಗುತ್ತಾರೆ. ಮೋಡವನ್ನು ಹುಡುಗ, 'ಆ ಮೋಡಗಳನ್ನು ನೋಡು, ಎಷ್ಟು ಸುಂದರವಾಗಿವೆ ನಿನ್ನ ಹಾಗೆಯೇ' ಎಂದು ಹೇಳುತ್ತಿರುವ ಹೊತ್ತಿಗೇ ತೆರೆಯ ಒಂದು ಅಂಚಿನಲ್ಲಿ ರಕ್ತಸಿಕ್ತ ಕೈ ಕಾಣಿಸುತ್ತದೆ. ಅಂದರೆ ಈಗ ಮಾತಾಡುತ್ತಿರುವುದು ಯಾರು? ಆ ರಕ್ತಸಿಕ್ತ ಕೈಗಳು ಯಾರವು? ಏನಾಗುತ್ತಿದೆ ಅಲ್ಲಿ? ಈ ಪ್ರಶ್ನೆಗಳು ಮೂಡುವ ಹೊತ್ತಿಗೇ ಅದಕ್ಕೆ ಉತ್ತರವೂ ದೊರೆಯುತ್ತ ಹೋಗುತ್ತದೆ.

ಹನ್ನೆರಡು ನಿಮಿಷಗಳ ಈ ಕಿರುಚಿತ್ರದಲ್ಲಿ ತೆರೆಯ ಮೇಲೆ ಒಂದು ಮನುಷ್ಯ ಆಕೃತಿ ಕಾಣಿಸಿಕೊಳ್ಳುವುದು ಆರು ನಿಮಿಷಗಳ ನಂತರ. ದೂರದ ಬಯಲಿನಲ್ಲಿ ಹೆಣ್ಣೊಬ್ಬಳು, ತನ್ನ ಗೆಳೆಯನಿಗಾಗಿ ಹುಡುಕುತ್ತ ಗಾಬರಿಯಿಂದ ಓಡಿ ಬರುತ್ತಿರುವುದು ಕಾಣಿಸುತ್ತದೆ. ಅವನ ಮೃತದೇಹ ಆ ಜಾಗದಲ್ಲಿ ಬಿದ್ದಿದೆ. ಅಲ್ಲಿಂದ ಮುಂದೆ ಅವಳನ್ನು ಕೇಂದ್ರೀಕರಿಸಿಕೊಂಡು ವರ್ತಮಾನದಲ್ಲಿಯೇ ಕಥೆ ಸಾಗುತ್ತದೆ.

ಈ ಕಿರುತ್ರದ ಕಥೆ ತುಂಬಾ ಸಾಧಾರಣವಾದುದು. ಈ ಸಾಧಾರಣ ಕಥೆ ನಮ್ಮಲ್ಲಿ ಬೆರಗು ಹುಟ್ಟಿಸುವುದು ಅದರ ಅಸಾಂಪ್ರದಾಯಿಕ ನಿರೂಪಣೆ ಮತ್ತು ಅಸಹಜವೆನಿಸದ ಪ್ರಯೋಗಶೀಲತೆಯ ಮೂಲಕ. ಮೊದಲಾರ್ಧದ ಧ್ವನಿ ವಿನ್ಯಾಸ, ಛಾಯಾಗ್ರಹಣ, ಮತ್ತು ತೆರೆಯ ಮೇಲೆ ಕಾಣಿಸುವ ವಿವರಗಳು ಎಷ್ಟು ಸಶಕ್ತವಾಗಿವೆ ಎಂದರೆ ದ್ವಿತೀಯಾರ್ಧದಲ್ಲಿ ಮನುಷ್ಯ ಪಾತ್ರಗಳು ಕಾಣಿಸಿಕೊಂಡ ಮೇಲೆಯೇ ದುರ್ಬಲಗೊಂಡಿತೇನೋ ಅನಿಸಿಬಿಡುತ್ತದೆ.

ಇಷ್ಟು ವಿಭಿನ್ನ ಮತ್ತು ಸೃಜನಶೀಲವಾದ ಪ್ರಯೋಗಕ್ಕೆ ಹೊಳಪು ನೀಡುವಂಥ ಕಥನ ಆತ್ಮವೂ ಸೇರಿಕೊಂಡಿದ್ದರೆ ಈ ಕಿರುಚಿತ್ರ ಇನ್ನೆಷ್ಟು ಪ್ರಭಾವಶಾಲಿ ಆಗುತ್ತಿತ್ತಲ್ಲ ಎಂಬ ಅತೃಪ್ತಿಯನ್ನೂ ಕೊನೆಗೆ ಉಳಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2OhxUiL ಕೊಂಡಿ / ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.